ಪ್ರಾರಂಭಿಸಲಾಗುವುದು. ಆಡಳಿತಾತ್ಮಕ ಮಂಜೂರಾತಿ ನೀಡಿದ 11 ಕಾಮಗಾರಿಗಳಲ್ಲಿ ಬಾಕಿ ಉಳಿದ 2 ಕಾಮಗಾರಿಗಳಿಗೆ ಟೆಂಡರ್ ಕರೆದು ಗುತ್ತಿಗೆದಾರರನ್ನು ನಿಗದಿಪಡಿಸ ಬೇಕಾಗಿದೆ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಅನುಬಂಧ

ಮಲೆನಾಡು ಅಭಿವೃದ್ಧಿ ಮಂಡಳಿಯಡಿಯಲ್ಲಿ ಬ್ರಹ್ಮಾವರ ವಿಧಾನ ಸಭಾ ಕ್ಷೇತ್ರದಲ್ಲಿ ಮಂಜೂರಾದ ಕಾಮಗಾರಿಗಳ ವಿವರ

(ಲಕ್ಷ ರೂ.ಗಳಲ್ಲಿ)

ಕ್ರಮ ಸಂಖ್ಯೆ	ಕೆಲಸದ ಹೆಸರು	ಅಂದಾಜು ವೆಚ್ಚ
1.	ಕೊಕ್ಕರ್ಣೆ ಮಿಯಾರು ರಸ್ತೆ ವಿಶೇಷ ದುರಸ್ತಿ (ಕಿ.ಮಿ. 2 ರಿಂದ 7)	2.00
2.	ಪರ್ಡೂರು ಮುನಿಯಾಲು ರಸ್ತೆಯ 1.30 ರಿಂದ 1.65 ಕಿ.ಮಿ. ವರೆಗೆ ಡಾಂಬರು	1.05
3.	ಬಜೆಪೆರ್ಡೂರು (ಪೆರ್ಡೂರು ಬಜೆ) ರಸ್ತೆಯ 0-2.10 ಕಿ.ಮಿ. 5.63-4.63 ಕಿ.ಮಿ. ವರೆಗೆ ಡಾಂಬರು	2.00
4.	ಉಡುಪಿ ತಾ. ಹಾವಂಜೆ ಮಂ. ಹಾವಂಜೆಬೆಳ್ಕಂಪಳ್ಳಿ ರಸ್ತೆಗೆ ಡಾಂಬರು 0 ದಿಂದ 658 ಕಿ.ಮಿ.	1.50
5.	ಉಡುಪಿ ತಾ. ಹಾವಂಜೆ ಮಂ. ಕುಕ್ಕೆಪಳ್ಳಿ ಮಡಿವೇತ್ರಿ 0 ರಿಂದ 1.00 ಕಿ.ಮಿ. ವರೆಗೆ	2.00
6.	ಉಡುಪಿ ಬ್ರಹ್ಮಾವರ ಮಂ. ಚಾಂತಾರು ಅಂಗಡಿಪೆಟ್ಟು ರಸ್ತೆ ಅಭಿವೃದ್ಧಿ 0 ರಿಂದ 1.00 ಕಿ.ಮಿ. ವರೆಗೆ	2.00
7.	" ಕೊರ್ಕಣಿ ಮಂ. ನಾಲ್ಕೂರು ಸಂಚಾರು ರಸ್ತೆಗೆ 0 ರಿಂದ 0.50 ಕಿ.ಮಿ. 5.80-6.30ವರೆಗೆ ಡಾಮರು ಮತ್ತು 1 ರಿಂದ 5.00 ಕಿ.ಮಿ. ವರೆಗೆ ದುರಸ್ತಿ	2.00
8.	" ಸಾಬರಕಟ್ಟೆ ಮಂ. ಅಲ್ತಾರು ಮಂದರ್ತಿ ರಸ್ತೆ ಅಭಿವೃದ್ಧಿ	2.00
9.	ಉಡುಪಿ ತಾ. ಬ್ರಹ್ಮಾವರ ಮಂ. ನಂಚಾರು ಗ್ರಾಮದ ಅಮ್ರಕಲ್ಲು ಹೆಸ್ಕುಂದಲು ಎಂಬಲ್ಲಿ ಕಿರು ಸೇತುವೆ ರಚನೆ.	2.00
10.	ಶಿರೂರು ಕೊಕ್ಕರ್ಣೆ-ಸಂತೆಕಟ್ಟೆ ರಸ್ತೆ ಕಿ.ಮಿ.16ರಲ್ಲಿ ಬಲ್ಲಿಬೈಲು ಹಳ್ಳಕ್ಕೆ ಸೇತುವೆ ಮರು ರಚನೆ	5.95
11.	ಮಂಕಿನಜಿಡ್ಡು-ಬಿನಗಲ್-ಕೊಕ್ಕರ್ಣೆ ರಸ್ತೆ ಅಭಿವೃದ್ಧಿ ಕಿ.ಮಿ. 1.20 ರಿಂದ 2.50ರ ವರೆಗೆ.	3.50
		26.00

ಹಿರೇಕೆರೂರು ತಾಲ್ಲೂಕು ನೇತ್ಯೆ ಕೆರೆಯಿಂದ ಮಾವಿನ ತೋಪು ಕೆಳಗೆ ಫೀಡರ್ ಛಾನಲ್

288 - ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು): ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಹಿರೇಕೆರೂರು ತಾಲ್ಲೂಕು ನೆಸ್ಟಿ ಕೆರೆಯಿಂದ ಮಾವಿನ ತೋಪ್ ಕೆರೆಗೆ ಫೀಡರ್ಚಾನಲ್ ನಿರ್ಮಾಣ ಮಾಡಲು ನಕ್ಷೆ ಹಾಗೂ ಅಂದಾಜುಪಟ್ಟಿ ತಯಾರಿಸಲಾಗಿದೆಯೇ ಮತ್ತು ಅದಕ್ಕೆ ಮಂಜೂರಾತಿ ದೊರೆತಿದೆಯೇ;

ಅ) ಈ ಕಾಮಗಾರಿಯ ಅಂದಾಜು ಮೊತ್ತವೆಷ್ಟು ಮತ್ತು 1992-93ರ ಆಯವ್ಯಯದಲ್ಲಿ ಒದಗಿಸಿದ ಹಣವೆಷ್ಟು ಹಾಗೂ ಈವರೆಗೆ ಈ ಕಾಮಗಾರಿಗೆ ಆಗಿರುವ ವೆಚ್ಚವೆಷ್ಟು;

ಇ) 1993-94ನೇ ಆಯವ್ಯಯದಲ್ಲಿ ಈ ಯೋಜನೆಗೆ ಒದಗಿಸಿದ ಹಣವೆಷ್ಟು;

ಈ) ಈ ಕಾಮಗಾರಿಯ ಕೆಲಸ ಯಾವ ಹಂತದಲ್ಲಿದೆ;

ಉ) ಈ ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗಧಿಪಡಿಸಿದ ಸಮಯ ಎಷ್ಟು ಹಾಗೂ ಈ ಕಾಮಗಾರಿಯ ಬಗ್ಗೆ ರಾಜ್ಯ ಸರ್ಕಾರದ ನೀತಿ ಹಾಗೂ ಕ್ರಮವೇನು ?

ಡಾ॥ ಆರ್.ಬಿ. ಚೌಧರಿ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) ನಕ್ಷೆ ಹಾಗೂ ಅಂದಾಜು ತಯಾರಾಗಿದ್ದು ಮಾರ್ಚ್ 1993ರಲ್ಲಿ ಆಡಳಿತಾತ್ಮಕ ಅನುಮೋದನೆ ಹಾಗೂ ತಾಂತ್ರಿಕ ಮಂಡೂರಾತಿ ನೀಡಲಾಗಿದೆ.

ಆ) 1) ಅಂದಾಜು 6.65 ಲಕ್ಷ ರೂ.ಗಳು.

2) ಆಯವ್ಯಯದಲ್ಲಿ ಒದಗಿಸಿದ ಹಣ 2.00 ಲಕ್ಷ ರೂ.ಗಳು.

3) ಕಾಮಗಾರಿಗೆ ಆಗಿರುವ ವೆಚ್ಚ ಏನೂ ಇಲ್ಲ.

ಇ) 3.00 ಲಕ್ಷ ರೂ.ಗಳು.

ಈ) ಇನ್ನು ಕಾಮಗಾರಿಯನ್ನು ಕೈಗೆತ್ತಿಕೊಂಡಿಲ್ಲ.

ಉ) ಅನುದಾನದ ಲಭ್ಯತೆಗೆ ಅನುಗುಣವಾಗಿ ಕೆಲಸವನ್ನು ಕೈಗೆತ್ತಿಕೊಂಡು ಪೂರ್ಣಗೊಳಿಸುವ ಕಾರ್ಯಕ್ರಮ ಹಾಕಿಕೊಳ್ಳಲಾಗುವುದು.

ಹಿರೇಕೆರೂರು ತಾಲ್ಲೂಕಿನ ರಟ್ಟೇಹಳ್ಳಿ, ಕುಡಪಲಿ ಬ್ಯಾರೇಜ್ ನಿರ್ಮಾಣ

289 - ಶ್ರೀ ಬಿ.ಪಿಚ್. ಬನ್ನಿಕೋಡ್ (ಹಿರೇಕೆರೂರು) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹಿರೇಕೆರೂರು ತಾಲ್ಲೂಕಿನ ಕುಮದ್ವತಿ ನದಿಗೆ ರಟ್ಟೇ ಹಳ್ಳಿ ಹಾಗೂ ಕುಡಪಲ್ಲಿ ಪತ್ತಿರ ಬ್ಯಾರೇಜ್ ಕಟ್ಟಲು ಆಯವ್ಯಯದಲ್ಲಿ ಒದಗಿಸಿದ ಹಣವೆಷ್ಟು;

ಆ) ಈ ಕಾಮಗಾರಿಗಳ ಬಗ್ಗೆ ಅಂದಾಜುಗಳನ್ನು ತಯಾರಿಸಲಾಗಿದೆಯೇ; ಹಾಗೂ ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿಯನ್ನು ಪಡೆಯಲಾಗಿದೆಯೇ;

ಇ) ಈ ಕಾಮಗಾರಿಗಳನ್ನು ಪ್ರಾರಂಭಿಸಲು ವಿಳಂಬವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಈ ವಿಳಂಬಕ್ಕೆ ಯಾರು ಕಾರಣರು ಮತ್ತು ಆ ಬಗ್ಗೆ ಸರ್ಕಾರದ ಕ್ರಮವೇನು;

ಉ) ಈ ಕಾಮಗಾರಿಗಳನ್ನು ಯಾವಾಗ ಪ್ರಾರಂಭಿಸಲು ಮತ್ತು ಪೂರ್ಣಗೊಳಿಸಲು ಸರ್ಕಾರ ಉದ್ದೇಶಿಸಿದೆ ?

ಡಾ॥ ಆರ್.ಬಿ. ಚೌಧರಿ (ಸಣ್ಣ ನೀರಾವರಿ ರಾಜ್ಯ ಸಚಿವರು) :

1993-94ನೇ ಸಾಲಿನ ಆಯವ್ಯಯದಲ್ಲಿ ರಟ್ಟೇಹಳ್ಳಿ ಬ್ಯಾರೇಜಿಗೆ 9.00 ಲಕ್ಷ ರೂ. ಹಾಗೂ ಕುಡಪಲಿ ಬ್ಯಾರೇಜಿಗೆ ತಿದ್ದುಪಡಿ ಆಯವ್ಯಯದಲ್ಲಿ 18.00 ಲಕ್ಷ ರೂ.ಗಳ ಅನುದಾನ ಒದಗಿಸಲಾಗಿದೆ.

ಅ) ಅಂದಾಜು ಪಟ್ಟಿಗಳನ್ನು ಸಿದ್ಧಪಡಿಸಲಾಗಿದೆ. ಅಂದಾಜುಗಳು ಸರ್ಕಾರದ ಪರಿಶೀಲನೆ ಹಂತದಲ್ಲಿವೆ.